150 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿಸಿತ್ತಾಳೆ.

ಸದರೀ ದರಖಾಸ್ತುದಾರಳಾದ ಖಾಸಿಂಬೀ ಅರ್ಜೀಯನ್ನು 1885ನೇ ಇಸವಿ ಆಗಸ್ಟು ತಿಂಗಳು ತಾರೀಖು 18ರಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೌಸಸಾಹೇಬರ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ವೊಹರಿನಿ ನನ್ಮ್ರ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಂಹಯ್ಯಂಗಾರ್, ಡಿಸ್ಟ್ರಿಕ್ಟ್ ಜಡ್ಜ್.

ಅರಮನೆ ಇಲಾಖಾ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸಿನಿಂದ.

ತಾರೀಖು 21ನೇ ಜುಲೈ 1885.

ಇದರಿಂದಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಕಿಲ್ಲೇದಲ್ಲಿರುವ ಅಂಣೂರಾವಮರಾಯರಿಂದಲೂ, ಈರಣಗೆರೆಯಲ್ಲಿರುವ ಸ್ನಾನದಮನೆ ದೊಡ್ಡಕಿದ್ದಪ್ಪನಿಂದಲೂ ಅರಮನೆ ಸರಕಾರಕ್ಕೆ ಬರಬೇಕಾದ ಹಣವನ್ನು ನೋಟೀಸು ಕೊಟ್ಟಾಗ್ಯೂ ಪಾಯಿದೆ ಪ್ರಕಾರ ಅವರು ಕೊಡವೆ ಯಿದ್ದ ಸಬಬು ಈ ಕೆಳಗೆ ವಿವರಿಸಿರುವ ಅಣ್ಣೂರಾವಮರಾಯರ ಮನೆಯನ್ನೂ, ದೊಡ್ಡಕಿದ್ದಪ್ಪನ ಗದ್ದೇಯನ್ನೂ ಸಹಾ ಇದೇ ಇಸವಿ ಆಗಸ್ಟು 31ನೇ ತಾರೀಖು ದಿವಿ 11 ಘಂಟೆ ಲಾಗಾಯತು ಮೈಸೂರು ಕಿಲ್ಲೇದಲ್ಲಿ ಅರಮನೆ ಖಜಾನೆ ಬಳಿ ಈ ನೋಟೀಸಿಗೆ ಸ್ಪೈ ಮೊಹರತಕ್ಕ ಆಫೀಸರವರ ರೂಬರೂ ಹರಾಜು ಮಾಡಲ್ಪಡುತ್ತೆ. ಇಛ್ಛೆಯುಳ್ಳವರು ಬಂದು ಜಡ ಬರಟಾಸ್ತು ಪಾಡಿ ಪಡಿಯು ಬಹುದು. ಹರಾಜಿನಲ್ಲಿ ಪಡವವರು ಹರಾಜು ಟೈದಾದ ಕೂಡ್ಲೆ ನಾಲ್ಕರಲ್ಲಿ ವಂದೋಷಾಗ ಡಿಪಾಜಿಟ್ ಪೊಬಲಗು ಹಾಜುಮ್ಮಾಡಬೇಕಾದ್ದಲ್ಲದೆ ಪೂರಾ ಪೊಬಲಗು ಆ ಲಾಗಾಯತು ಹದಿನೈದು ದಿವಸದಲ್ಲಿ ಪಾವತೀ ಮಾಡಿ ರೀತಿ ಪಡದು ಸ್ವತ್ತುಗಳನ್ನ ಸ್ವಾಧೀನ ಪಡಿಸಿಕೊಳ್ಳಬೇಕು, ಹಾಗೆ ವಾಯಿದ ಪ್ರಕಾರ ಹಣ ಪಾವತೀ ಮಾಡದೆ ಯಿದ್ದರೆ ಸದರೀ ಸ್ವತ್ತುಗಳನ್ನ ಸರಕಾರದಿಂದ ಪುನಹಾ ಹರಾಜು ಮಾಡಿಸಿ ಲುಕ್ಸಾನ್ ಆಗತಕ್ಕ ಪೊಬಲಗಿಗೆ ಮೊದಲ ಹರಾಜಿನಲ್ಲಿ ಪಡದಿದ್ದವರನ್ನ ಗುರಿಮಾಡುತ್ತೆ, ತಿಳಿಯುವದು.

ಸ್ವತ್ತುಗಳ ವಿವರ.

1. ಮೈಸೂರು ಕಿಲ್ಲೇದಲ್ಲಿರುವದು—ಪೂರ್ವಕ್ಕೆ ಗಲ್ಲಿ ಮತ್ತು ಆಪ್ಪಾಜಿಸ್ತ್ರಿಗಳ ಮನೆ, ಪಶ್ಚಿಮಕ್ಕೆ ತ್ರಿಣೇಶ್ವರಸ್ವಾಮಿ ದೇವಸ್ತಾನದ ಯದರು ಭಾಗದಿಂದ ತಿರಗಾಡುವ ರಸ್ತೆ, ದಕ್ಷಿಣಕ್ಕೆ ತ್ರಿಣೇಶ್ವರಸ್ವಾಮಿ ದೇವಸ್ತಾನದ ಮುಗ್ಗಲು ರಸ್ತೆ, ಉತ್ತರಕ್ಕೆ ಮಾದಪ್ಪನ ಮನೆ, ಈ ಚತುರ್ಮಧ್ಯವಲ್ಲಿರುವದು, ದುಮಂಜಲೆ ಮನೆ, ಈ ಮನೆ ಮೇಲೆ ಅಣ್ಣೂರಾವಮರಾಯರಿಂದ ಸರಕಾರಕ್ಕೆ ಬರಬೇಕಾದ ಪೊಬಲಗು 1,065 ರೂಪಾಯಿಗಳು.
1. ಶ್ರೀರಂಗಪಟ್ಣತಾಲ್ಲೂಕು ಕ್ಯಾತನಹಳ್ಳಿಹೋಬಳಿ ಪೈ ೇ ಸರ್ವಮಾನ್ಯ ದೊಡ್ಡೀಗೌಡನ ಕೊಪ್ಪಲ್‌ನಲ್ಲಿರುವದು ಪೂರ್ವಕ್ಕೆಗೋಮಾಳ, ದಕ್ಷಿಣಕ್ಕೆ ಹೊಳೆ ಅರಗು, ಪಶ್ಚಿಮಕ್ಕೆ ಖಾನುಭೋಗ ಕೃಷ್ಣಪ್ಪನ ಗದ್ದೆ, ಉತ್ತರಕ್ಕೆ ವೊಖಾಮಿ ಗದ್ದೇ ಮತ್ತು ಲಿಂಗೇಗೌಡನ ಗದ್ದೇ ಈ ಚತುರ್ಮಧ್ಯದಲ್ಲಿರುವ ಬೀಜವರೀ ಎಕರೆ ಗುಂಟೆ ಕಂದಾಯ ಲೋಕಲ್‌ಫಂಡ್ ವಗೈರೆ 34 ರೂಪಾಯಿವುಳ್ಳ ತರೀ ಜಮೀನು.

ಈ ಗದ್ದೇ ಮೇಲೆ ಸ್ನಾನದಮನೆ ದೊಡ್ಡಕಿದ್ದಪ್ಪನಿಂದ ಸರಕಾರಕ್ಕೆ ಬರಬೇಕಾದ ಪೊಬಲಗು 1,500 ರೂಪಾಯಿಗಳು.

ಇ. ಚಿತಂಬರಂಜಯ್ಯರ್,
ಅರಮನೆ ಇಲಾಖಾ ಅ|| ಕಮ್ಮಿಷನರ್.

ತಾರೀಖು 18ನೇ ಜುಲೈ 1885.

ಮೈಸೂರಿನಲ್ಲಿ ಇರುವ ಮೈಸೂರು ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟಿದಾರರುಗಳಿಗೆ ಇದರಿಂದ ತಿಳಿಸುವದೇನಂದರೆ.—ಸ್ಯ 1885ನೇ ಇಸವಿ ಮಾರ್ಚೀ 31ನೇ ಮುಕ್ತಾಂವರಿಗೆ ಆಗುವ ಬಡ್ಡಿ ಫೈಸಲ್ ಬ್ಯೈ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಮೈಸೂರು ಡಿಸ್ಟ್ರಿಕ್ಟು ಖಜಾನೆಯಲ್ಲಿ ಹಾಜರ್ಮಾಡತಕ್ಕದ್ದು.

ಡಿ. ದೇವರಾಜಅರಸ್,
ಟ್ರೆಜರೀ ಆಫೀಸರ್.